- 15 -

ಸಾಕ್ಷಿ ಯನ್ನು ದಿಃ 17.12.2025 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದ**

1. ನಿಡಿ.14 ರ ಪ್ರಕಾರ ಪಿ.ಡಿ. ಕೆಂಪೇಗೌಡ ರವರು ನಿಮ್ಮ ತಾತ ಎಂದರೆ ಸರಿ. ಪುಟ್ಟಮ್ಮ ನೀಮ್ಮ ಅಜ್ಜಿ ಎಂದರೆ ಸರಿ. ಸದರಿ ರವರು ಮೃತರಾಗಿರುತ್ತಾರೆ ಎಂದರೆ ಸರಿ. ಉಮೇಶ ಬಿನ್ ಕೆಂಪೇಗೌಡ ರವರು ನಮ್ಮ ಚಿಕ್ಕಪ್ಪ ಹಾಗೂ ಈ ದಾವೆಯ 7 ನೇ ಪ್ರತಿವಾದಿ ಸರಿ.
2. ನಾರಾಯಣ ರವರು ನಿಮ್ಮ ಚಿಕ್ಕಪ್ಪ ಎಂದರೆ ಸರಿ. ಅವರು 2 ನೇ ಪ್ರತಿವಾದಿ ಎಂದರೆ ಸರಿ. ವಾಸುದೇವ ರವರು ನಿಮ್ಮ ಚಿಕ್ಕಪ್ಪ ಎಂದರೆ ಸರಿ. ಅವರು 5 ನೇ ಪ್ರತಿವಾದಿ ಎಂದರೆ ಸರಿ.
3. ನಿಡಿ. 14 ರ ಪಹಣಿಯಲ್ಲಿ ನಿಮ್ಮ ತಂದೆಯ ಹೆಸರು ಅಥವಾ ನಿಮ್ಮ ಹೆಸರು ನಮೂದಾಗಿದೆಯೊ ಎದರೆ, ಇಲ್ಲ ಆದರೆ ನಮ್ಮನ್ನು ಬಿಟ್ಟು ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯಲ್ಲಿ ನಿಮಗೆ ಭಾಗ ಬರಬೇಕು ಎಂದರೆ ಸರಿ.
4. 3 ನೇ ಪ್ರತಿವಾದಿ ಪಿ ಕೆ ರಾಜಶೇಖರ ರವರ ಹೆಸರು ನಮೂದಾಗಿಲ್ಲ ಎಂದರೆ ಸರಿ.
5. ನಿಡಿ. 17 ರಿಂದ 19 ರ ಪೋಟೊಗಳಲ್ಲಿ ಇರುವ ಕಟ್ಟಡವನ್ನು ನೀವು ಕಟ್ಟಿದ್ದೀರಾ ಎಂದರೆ, ನಾನು ಕಟ್ಟಿಲ್ಲ ಎಂದು ನುಡಿಯುತ್ತಾರೆ.
6. ನಿಡಿ. 14 ರ ಪಹಣಿಯಲ್ಲಿ ಇಟ್ಟಿಗೆ ಫ್ಯಾಕ್ಟರಿ ಅಥವಾ ಯಾವುದೇ ಕಟ್ಟಡವನ್ನು ಕಟ್ಟಿರುವುದಾಗಿ ನಮೂದಾಗಿದೆಯಾ ಎಂದರೆ, ಸಾಕ್ಷಿಯು ಪಹಣಯಲ್ಲಿ ನಮೂದಾಗಿಲ್ಲ ಮತ್ತು ಪೊಟೋದಲ್ಲಿ ನಮೂದಾಗಿದೆ.
7. ನಿಡಿ.7 ರಿಂದ 20 ರ ದಾಖಲೆಗಳು ದಾವಾ ಸ್ವತ್ತಿಗೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ.
8. ನಿಡಿ.17 ರಿಂದ 20 ರ ಪೋಟೊಗಳಲ್ಲಿ ಇರುವ ಇಟ್ಟಿಗೆ ಫ್ಯಾಕ್ಟರಿ ಮತ್ತು ಕಟ್ಟಡಕ್ಕೆ ಸಂಬಂಧಪಟ್ಟ ದಾಖಲಾತಿಗಳನು ನೀವು ಹಾಜರು ಮಾಡಿದ್ದೀರಾ ಎಂದರೆ, ಹಾಜರು ಮಾಡಿಲ್ಲ. ಸ.ನಂ. ನ್ನು ಹಾಜರು ಮಾಡಿದ್ದೇನೆ. ಯಾವುದೇ ಕಟ್ಟಡವನ್ನು ಕಟ್ಟಲು ಪರವಾನಿಗೆ ಬೇಕು.
9. ನಿಮ್ಮ ಅಜ್ಜಿ ಪುಟ್ಟಮ್ಮ ಕೋಂ ಪಿ ಡಿ ಕೆಂಪೇಗೌಡ ರವರು ಮತ್ತು ಪಟೇಲ ದೇವೆಗೌಡ ರವರ ಮೊಮ್ಮಗಳು ಎಂದರೆ ಸರಿ. ನಿಪಿ.11 ರ ಕ್ರಯ ಪತ್ರದ ಪ್ರಕಾರ 24.04.1951 ರಲ್ಲಿ

ಗಿರಿಮಾಜೀರಾವ  ರವರ ಮಕ್ಕಳಾದಂತಹ ಶೇಸಗಿರಿ ರಾವ ಮತ್ತು ಯಲ್ಲಪ್ಪ ರಾವ ಮತ್ತು ಚಂದ್ರರಾವ ರವರಿಂದ  ದಾವಾ ಸ್ವತ್ತನ್ನು ಖರೀದಿ ಮಾಡಿದರು ಎಂದರೆ, ಸಾಕ್ಷಿಯು ಸರಿಯಲ್ಲ.

10. ಸದರಿ ವಿಚಾರ ಗೊತ್ತಿದ್ದರು ಸಹ ಸದರಿ ದಾವಾ ಆಸ್ತಿಯಲ್ಲಿ ಎಲ್ಲರಿಗೂ ಸಮಾನವಾದ ಹಕ್ಕು ಇದ್ದರು ಸಹ ನೀವು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,  ಪಿರಿಯಾಪಟ್ಟಣ